# 'ಶ್ರೀರಾಮಕೃಷ್ಣ ವಚನವೇದ' ಭಾವಧಾರೆ - 7

ಸ್ವಾಮಿ ನಿತ್ಯಸ್ಥಾನಂದ

### ವಿಷಯವೇ ವಿಷ

ಶ್ರೀರಾಮಕೃಷ್ಣರು ಮುಂದುವರಿದು ಹೇಳುತ್ತಾರೆ: ''ಭಗವಂತನಲ್ಲಿ ಭಕ್ತಿ ಬೆಳಸಿಕೊಳ್ಳುವುದಕ್ಕೆ ಮುನ್ನ ಸಂಸಾರಕ್ಕೆ ಕಾಲಿಟ್ಟೆ ಎಂದರೆ, ಇನ್ನೂ ಅಧಿಕಾಧಿಕವಾಗಿ ಕಷ್ಟಪರಂಪರೆಗಳಿಗೆ ಈಡಾಗುವೆ. ಶೋಕ ತಾಪ ವಿಪತ್ತು ಇವುಗಳಿಂದ ಸಂಪೂರ್ಣ ಬೆಂದು ಬೆಂಡಾಗಿ ಹೋಗುವೆ. ವಿಷಯಚಿಂತನೆ ಮಾಡಿದಷ್ಟೂ ಅವುಗಳಲ್ಲಿ ಆಸಕ್ತಿಯೂ ಬೆಳೆಯುತ್ತ ಹೋಗುತ್ತದೆ.'' ಆದ್ದರಿಂದಲೇ ನಮ್ಮ ಶಾಸ್ತ್ರದಲ್ಲಿ **ವಿಷಯಂ ವಿಷವತ್ ತ್ಯಜೇತ್** ''ವಿಷಯವನ್ನು ವಿಷದಂತೆ ತ್ಯಜಿಸಬೇಕು'' ಎಂದು ಹೇಳಿರುವುದು.

ಶ್ರೀಶಂಕರಾಚಾರ್ಯರು 'ವಿವೇಕ ಚೂಡಾಮಣಿ'ಯಲ್ಲಿ ವಿಷಯವು ಕೃಷ್ಣಸರ್ಪಕ್ಕಿಂತ ತೀವ್ರವಾದುದು ಎಂದು ಹೇಳುತ್ತಾರೆ: *(ಶ್ಲೋಕ ೭೭)*

**ದೋಷೇಣ ತೀವ್ರೋ ವಿಷಯಃ ಕೃಷ್ಣಸರ್ಪವಿಷಾದಪಿ ।**
**ವಿಷಂ ನಿಹಂತಿ ಭೋಕ್ತಾರಂ ದ್ರಷ್ಟಾರಂ ಚಕ್ಷುಷಾಪ್ಯಯಮ್ ॥**

''ವಿಷವನ್ನು ಕುಡಿದರೆ ಅದು ವ್ಯಕ್ತಿಯನ್ನು ಕೊಲ್ಲುತ್ತದೆ. ಆದರೆ ವಿಷಯವನ್ನು ನೋಡಿದರೆ ಸಾಕು, ಸರ್ವನಾಶ.'' ಶ್ರೀರಾಮಕೃಷ್ಣರು ಮೇಲೆ ಹೇಳಿದ ಮಾತನ್ನೇ ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳಿರುತ್ತಾನೆ: ''ವಿಷಯಚಿಂತನೆ ಮಾಡುತ್ತ ಹೋದರೆ ಅದರಲ್ಲಿ ಆಸಕ್ತಿಯು ಬೆಳೆಯುತ್ತದೆ. ಇದರಿಂದ ಅದನ್ನು ಪಡೆಯಬೇಕು. ಅದರ ಸುಖವನ್ನು ಅನುಭವಿಸಬೇಕು ಎಂಬ ತೀವ್ರ ಆಸೆಯುಂಟಾಗುತ್ತದೆ. (ಕಾಮ) ಆಸೆಗಳೆಲ್ಲ ಪೂರ್ತಿಯಾಗದೇ ಇರುವುದರಿಂದ ಹತಾಶಮನೋಭಾವ (frustration) ಉಂಟಾಗಿ ವ್ಯಕ್ತಿಯು ಕೋಪಿಷ್ಠನಾಗುತ್ತಾನೆ (ಕ್ರೋಧ) ಈ ಕ್ರೋಧದಿಂದ ಮೋಹವುಂಟಾಗಿ, ಅದರಿಂದ ತಾನೇನು ಮಾಡುತ್ತಿರುವೆನೆಂಬುದನ್ನೇ ಮರೆತು ಬಿಡುತ್ತಾನೆ. (ಸ್ಮೃತಿ ವಿಭ್ರಮಃ). ಇದರಿಂದ ವಿಚಾರ ಬುದ್ಧಿಯನ್ನು ಕಳೆದುಕೊಂಡು ವ್ಯಕ್ತಿಯು ಹಾಳಾಗಿ ಹೋಗುತ್ತಾನೆ. (ಪ್ರಣಶ್ಯತಿ). *(ನೋಡಿ, ಗೀತೆ, ಎರಡನೆಯ ಅಧ್ಯಾಯ, ೬೨-೬೩)*

ಆದ್ದರಿಂದ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಮೊದಲು ಕೈಗೆ ಎಣ್ಣೆ ಸವರಿಕೊಂಡು ಹಲಸಿನಹಣ್ಣನ್ನು ಬಿಡಿಸಬೇಕು. ಇಲ್ಲದಿದ್ದರೆ ಕೈಗೆ ಅಂಟು ಹತ್ತಿಕೊಂಡುಬಿಡುತ್ತದೆ. ಭಗವದ್ಭಕ್ತಿ ಎಂಬ ಎಣ್ಣೆಯನ್ನು ಮೊದಲು ಹವಣಿಸಿಕೊಂಡು ಬಳಿಕ ಸಾಂಸಾರಿಕ ಕೆಲಸಕಾರ್ಯಗಳಲ್ಲಿ ಕೈಇಡಬೇಕು.'' ಭಗವದ್ಭಕ್ತಿ ಎಣ್ಣೆ ಇದ್ದಂತೆ. ಅದಿದ್ದರೆ ಎಲ್ಲ ಜಾರಿ ಹೋಗಿಬಿಡುತ್ತದೆ. ವಿಷಯಾಸಕ್ತಿಯೂ ಜಾರಿಹೋಗಿಬಿಡುತ್ತದೆ. ಎಣ್ಣೆಯನ್ನು ನಾವು ಮನಸ್ಸಿಗೆ ಬಳಿದುಕೊಳ್ಳಬೇಕು. ವಿಷಯಾಸಕ್ತಿ ಮೇಣ (ಅಂಟು) ಇದ್ದಂತೆ. ಅದಿದ್ದರೆ ಇಡೀ ಪ್ರಪಂಚವೇ ಅದಕ್ಕೆ ಅಂಟಿಕೊಂಡು ಬಿಡುತ್ತದೆ. ಅಂತಹ ವ್ಯಕ್ತಿಗಳೊಡನೆ ಯಾರು ಇರುತ್ತಾರೋ ಅವರಿಗೂ ಅದು ಅಂಟುತ್ತದೆ.

'ಭಕ್ತಿಸೌರಭ' ಎಂಬ ಪುಸ್ತಕದಲ್ಲಿ ಹೀಗೆ ಹೇಳಲಾಗಿದೆ: ''ವಿಷಯಾಸಕ್ತಿಯೇ ಒಂದು ಪಾಶ. ಯಮನು ಜೀವಿಗಳನ್ನು ಎಳೆದುಕೊಂಡು ಹೋಗುವುದಕ್ಕೆ ಯಮಲೋಕದಿಂದಲೇ ಪಾಶವನ್ನು ತರಬೇಕಾಗಿದ್ದಿದ್ದರೆ, ಅವನು ಅಲ್ಲಿ ಪಾಶವನ್ನು ತಯಾರಿಸುವ ಒಂದು ದೊಡ್ಡ ಕಾರ್ಖಾನೆಯನ್ನೇ ನಡೆಸಬೇಕಾಗುತ್ತಿತ್ತು. ಅವನೇನೂ ಆ ತೊಂದರೆ ತೆಗೆದುಕೊಳ್ಳುವುದಿಲ್ಲ. ಅವನು ಬರಿಗೈಯಲ್ಲೇ ಬರುತ್ತಾನೆ. ಏಕೆಂದರೆ ಜೀವಿಗಳಲ್ಲಿಯೇ ಆ ಪಾಶ ಇದೆ (in-built) — ಅದೇ ವಿಷಯಾಸಕ್ತಿ.'' ಸ್ವಾಮಿ ಯತೀಶ್ವರಾನಂದರು ಆಸಕ್ತಿ ಹೇಗೆ ನಮ್ಮೊಳಗೆ ನುಸುಳುತ್ತದೆ ಎಂಬುದನ್ನು ಒಂದು ಉದಾಹರಣೆಯ ಮೂಲಕ ವಿವರಿಸುತ್ತಾರೆ: ''ಒಬ್ಬನು ರಾತ್ರಿ ತನ್ನ ಒಂಟೆಯನ್ನು ಹೊರಗೆ ಇರಿಸಿ ತಾನು ಟೆಂಟಿನೊಳಗೆ ಮಲಗಿದ್ದನು. ಹೊರಗೆ ಚಳಿಯನ್ನು ತಡೆಯಲಾಗದೆ ಒಂಟೆಯು ಸ್ವಲ್ಪವೇ ತನ್ನ ಮೂತಿಯನ್ನು ಟೆಂಟಿನೊಳಗೆ ತೂರಿಸಿತು. ಯಜಮಾನನು 'ಏಯ್! ಏನು ಮಾಡುತ್ತಿರುವೆ?' ಎಂದು ಗದರಿಸಿದನು. 'ಏನಿಲ್ಲ, ಕೇವಲ ನನ್ನ ತಲೆಯನ್ನು ಮಾತ್ರ ಒಳಗೆ ಇರಿಸುತ್ತೇನೆ' ಎಂದಿತು ಒಂಟೆ. ಯಜಮಾನನು ಪರವಾಗಿಲ್ಲ ಎಂದು ಸುಮ್ಮನಾದನು. ಮುಂದೆ ಒಂಟೆಯು ತನ್ನ ಮುಂಗಾಲುಗಳನ್ನು ಒಳಗೆ ತೂರಿಸಿತು. ಮತ್ತೆ ಯಜಮಾನನು ಗದರಿಸಿದಾಗ, 'ಇಷ್ಟೇ, ಇಷ್ಟೇ, ಇನ್ನೇನಿಲ್ಲ' ಎಂದು ಹೇಳಿ ಯಜಮಾನನನ್ನು ಸಮಾಧಾನಗೊಳಿಸಿತು. ಹೀಗೆ ಕ್ರಮೇಣ ಟೆಂಟಿನೊಳಗೆ ತಾನು ಪೂರ್ಣ ನುಸುಳಿಕೊಂಡು, ಯಜಮಾನನನ್ನೇ ಹೊರಗೆ ಹೋಗಲು ಹೇಳಿತು. ಹೀಗೆ ಕ್ರಮೇಣ ವಿಷಯಾಸಕ್ತಿಯು ನಮ್ಮೊಳಗೆ ನುಗ್ಗಿ ನಮ್ಮನ್ನು ನಾವು ಕಳೆದುಕೊಳ್ಳುವಂತೆ ಮಾಡುತ್ತದೆ.

### ಸಂಸಾರದಲ್ಲಿ ಬೆಣ್ಣೆಯಂತಿರಿ

ಮನಸ್ಸು ಸಂಸಾರದೊಂದಿಗೆ ಹೇಗೆ ಬೆರೆತುಹೋಗುತ್ತದೆ ಎಂಬುದನ್ನು ಒಂದು ಸುಂದರ ಉದಾಹರಣೆಯ ಮೂಲಕ

ಶ್ರೀರಾಮಕೃಷ್ಣರು ವಿವರಿಸುತ್ತಾರೆ: ''ಸಂಸಾರವೇ ನೀರು, ಮನಸ್ಸೇ ಹಾಲು. ಹಾಲನ್ನು ನೀರಿಗೆ ಸುರಿದರೆ ಅವೆರಡೂ ಬೆರೆತು ಒಂದಾಗಿಬಿಡುತ್ತವೆ. ಮತ್ತೆ ಶುದ್ಧ ಹಾಲು ಬೇಕೆಂದರೆ ಕಣ್ಣಮೇಲೆ ಕಣ್ಣಿಟ್ಟು ಹುಡುಕಿದರೂ ಅದು ದೊರೆಯುವ ಹಾಗೆ ಇಲ್ಲ. ಆದರೆ ಹಾಲಿಗೆ ಹೆಪ್ಪು ಹಾಕಿ ಮೊಸರು ಮಾಡಿ ಬೆಣ್ಣೆ ತೆಗೆದು ಅದನ್ನು ನೀರಿನಲ್ಲಿ ಇಟ್ಟರೆ ಅದು ಅಲ್ಲಿ ತೇಲಲಾರಂಭಿಸುತ್ತದೆ.'' ಮನಸ್ಸನ್ನು ಹಾಲಿಗೆ ಹೋಲಿಸಿರುವುದು ತುಂಬಾ ಉಚಿತ ವಾಗಿದೆ. ಹಾಲು ಬೆಳ್ಳಗಿರುವುದರಿಂದ ಸತ್ತ್ವಗುಣವನ್ನು ಸೂಚಿಸುತ್ತದೆ. ಮನಸ್ಸೂ ಕೂಡ ಸತ್ತ್ವಪ್ರಧಾನವಾದುದು. ನೀರು ಸಂಸಾರವಿದ್ದಂತೆ. ನೀರು ಚಂಚಲ ಸ್ವಭಾವವುಳ್ಳದ್ದು, ತುಂಬ ಚಲನಾತ್ಮಕವಾದುದು. ಸಂಸಾರವೆಂದರೇ ಚಲಿಸುವುದು ಎಂದರ್ಥ — ಸಮ್ಯಕ್ ಸರತಿ. ಮನವೆಂಬ ಹಾಲಿಗೆ ಭಗವನ್ನಾಮದ ಹೆಪ್ಪು ಹಾಕಬೇಕು; ಅದು ಮೊಸರಾದ ಮೇಲೆ ಧ್ಯಾನದ ಮೂಲಕ ಅದನ್ನು ಕಡೆಯಬೇಕು. ಬೇರೆಲ್ಲ ಕೆಲಸಗಳನ್ನೂ ಬದಿಗಿಟ್ಟು ನಿರ್ಜನವಾದ ಪ್ರದೇಶಕ್ಕೆ ಹೋಗಿ ಧ್ಯಾನ ಮಾಡಬೇಕೆಂದು ಹೇಳುತ್ತಿದ್ದರು. ಒಂದು ಉಪನಿಷದ್‌ವಾಣಿ ಇಲ್ಲಿ ನೆನಪಿಗೆ ಬರುತ್ತದೆ:

**ಘೃತಮಿವ ಪಯಸಿ ನಿಗೂಢಂ ಭೂತೇ ಭೂತೇ ವಸತಿ ವಿಜ್ಞಾನಮ್ ।**
**ಸತತಂ ಮಂಥಯಿತವ್ಯಂ ಮನಸಾ ಮಂಥಾನಭೂತೇನ ॥**

*(ಅಮೃತಬಿಂದೂಪನಿಷತ್)*

''ಹಾಲಿನಲ್ಲಿ ಬೆಣ್ಣೆಯು ಅಡಗಿರುವಂತೆ ಪ್ರತಿಯೊಂದು ಜೀವಿಯಲ್ಲಿಯೂ ಚೈತನ್ಯವು ಅಡಗಿಕೊಂಡಿರುವುದು. ಈ ಬೆಣ್ಣೆಯು ಅಭಿವ್ಯಕ್ತವಾಗಬೇಕಾದರೆ ಸದಾ ವ್ಯಕ್ತಿತ್ವವನ್ನು ಕಡೆಯಬೇಕು. ಇಲ್ಲಿ ಕಡಗೋಲು ಯಾವುದೆಂದರೆ ಮನಸ್ಸು.''

ಶ್ರೀರಾಮಕೃಷ್ಣರ ಅಭಿಪ್ರಾಯವನ್ನು ಈ ರೀತಿ ವ್ಯಕ್ತಪಡಿಸಬಹುದು. ಭಕ್ತಿಯ ಕವಚವನ್ನು ಧರಿಸಿ, ಜ್ಞಾನವೆಂಬ ಶಿರಸ್ತ್ರಾಣವನ್ನು ಹಾಕಿಕೊಂಡು, ವಿವೇಕವೈರಾಗ್ಯವೆಂಬ ಕತ್ತಿಗುರಾಣಿ ಹಿಡಿದು ಸಂಸಾರವೆಂಬ ರಣರಂಗವನ್ನು ಪ್ರವೇಶಿಸಬೇಕು.

### ಕಾಮ-ಕಾಂಚನ

ಶ್ರೀರಾಮಕೃಷ್ಣರು ಹೇಳುತ್ತಾರೆ: ''ಸಂಸಾರದಲ್ಲಿ ಕೇವಲ ಒಂದೇ ಒಂದರ ಚಿಂತನೆ: 'ಕಾಮಕಾಂಚನ'ದ ಚಿಂತನೆ.' ಶ್ರೀರಾಮಕೃಷ್ಣರು ಕಾಮಕಾಂಚನ ತ್ಯಾಗದ ಬಗ್ಗೆ ಬಹಳಷ್ಟು ಹೇಳುತ್ತಾರೆ. ಅವರೇಕೆ ಇವೆರಡಕ್ಕೆ ಹೆಚ್ಚು ಒತ್ತನ್ನು ಕೊಡುತ್ತಾರೆ, ಎಂಬುದರ ಬಗ್ಗೆ ಸ್ವಲ್ಪ ವಿಚಾರ ಮಾಡೋಣ. ಕಾಮ ಎಂದರೆ, ಮನಶ್ಶಾಸ್ತ್ರದ ಭಾಷೆಯಲ್ಲಿ pleasure principle - ಭೋಗೇಚ್ಛೆ - ಎಲ್ಲ ಬಗೆಯ ಇಂದ್ರಿಯ ಸುಖವನ್ನು ಬಯಸುವುದು. ಕಾಂಚನ ಎಂದರೆ possessive principle - ಹೊಂದುವ ಬಯಕೆ - ಹಣ, ಅಧಿಕಾರ, ಮನೆ, ಭೂಮಿ, ಸ್ಥಾನ ಮಾನ ಇತ್ಯಾದಿಗಳು ಎಷ್ಟಿದ್ದರೂ ಸಾಲದೆಂಬ ಆಗ್ರಹ. — ಈ ಎರಡು 'P' ಗಳನ್ನು ಬಿಡಬೇಕು-'ಪೀಪಿ' ಊದುವುದನ್ನು ಬಿಡಬೇಕು. ನಮ್ಮ ಅಹಂಕಾರ ಎರಡು ರೀತಿಯಲ್ಲಿ ತೋರಿಕೊಳ್ಳುತ್ತದೆ: ೧) 'ನಾನಿರಬೇಕು' '(I want to be)ಇದು ಕಾಂಚನಕ್ಕೆ ಸಂಬಂಧಿಸಿದುದು. 'ಅಹಂ'ನ ದೃಷ್ಟಿಯಲ್ಲಿ ನಾನಿರುವುದೆಂದರೆ ಹೊಂದಿರುವುದು. ಅಹಂಕಾರದ ಇರುವಿಕೆ ಹೊಂದಿರುವಿಕೆಯನ್ನು ಅವಲಂಬಿಸಿರುತ್ತದೆ. ಅದಕ್ಕಾಗಿಯೇ ಜನರು ಹಣ ಮುಂತಾದವುಗಳನ್ನು ಸಂಗ್ರಹಿಸಿಟ್ಟುಕೊಳ್ಳಲು ಹಾತೊರೆಯುತ್ತಾರೆ. ಅವುಗಳು ಹೋದರೆ ತಮ್ಮನ್ನೇ ಕಳೆದುಕೊಂಡಂತೆ ಅವರಿಗನಿಸುತ್ತದೆ. ೨) ನಾನು ಸುಖಿಸಬೇಕು- ಇದು ಕಾಮಕ್ಕೆ ಸಂಬಂಧಿಸಿದುದು. 'ನಾನಿರಬೇಕು ಮತ್ತು ಸುಖವಾಗಿರಬೇಕು' — ಇದೇ ಎಲ್ಲ ದುಃಖಗಳ ಮೂಲ. ನನ್ನ ಇರುವಿಕೆಯನ್ನು ಭಗವಂತನಲ್ಲಿ ಕಾಣುವಂತಾಗಬೇಕು, ಹಾಗೂ ಸುಖವನ್ನು ಭಗವಂತನಲ್ಲೇ ಕಾಣುವಂತಾಗಬೇಕು.

''ಯಾವ ಮಾನಸಿಕ ಅವಸ್ಥೆಯಲ್ಲಿ ಭಗವಂತನ ದರ್ಶನ ದೊರೆಯುತ್ತದೆ?'' ಎಂಬ ಪ್ರಶ್ನೆಗೆ ಶ್ರೀರಾಮಕೃಷ್ಣರು ಹೇಳುತ್ತಾರೆ: ''ಅತ್ಯಂತ ವ್ಯಾಕುಲನಾಗಿ ಅತ್ತರೆ ಆತನ ದರ್ಶನ ಪಡೆಯಲು ಸಾಧ್ಯ. ಹೆಂಡತಿ ಮಕ್ಕಳಿಗಾಗಿ ಜನ ಬಿಂದಿಗೆ ತುಂಬ ಕಣ್ಣೀರು ಸುರಿಸುತ್ತಾರೆ; ಕಣ್ಣೀರ ಸಾಗರದಲ್ಲೇ ತೇಲಾಡಿಬಿಡುತ್ತಾರೆ ಹಣಕ್ಕಾಗಿ. ಆದರೆ ಭಗವಂತ ಬೇಕೆಂದು ಯಾರು ತಾನೆ ಕಣ್ಣೀರಿಡುತ್ತಾರೆ? ಸಹಜ ಕರೆಯಿಂದ ಆತನನ್ನು ಕರೆಯಬೇಕು.'' ಶ್ರೀರಾಮಕೃಷ್ಣರು ಈ ಮಾತು ದ್ರಮಿಡೋಪನಿಷತ್ತಿನ ಈ ಶ್ಲೋಕವನ್ನು ಮನಸ್ಸಿಗೆ ತರುತ್ತದೆ:

**ಯಾ ಪ್ರೀತಿರಸ್ತಿ ವಿಷಯೇಷ್ವವಿವೇಕಭಾಜಾಮ್ ।**
**ಸೈವಾಚ್ಯುತೇ ಭವತಿ ಭಕ್ತಿಪದಾಭಿಧೇಯಾ ॥**

''ಅವಿವೇಕಿಗಳಿಗೆ ಪ್ರಾಪಂಚಿಕ ವಿಷಯಗಳಲ್ಲಿ ಯಾವ ಪ್ರೀತಿಯಿರುತ್ತದೆಯೋ ಅದೇ ಪ್ರೀತಿಯನ್ನು ಭಗವಂತನ ಕಡೆ ತಿರುಗಿಸಿದರೆ ಭಕ್ತಿ ಎಂದು ಕರೆಯಲ್ಪಡುತ್ತದೆ.''

ಕಣ್ಣೀರು ಅತ್ಯಂತ ಅಮೂಲ್ಯವಾದುದು — ಭಗವಂತನಿಗೆ ಅರ್ಪಿಸಲು ಯೋಗ್ಯವಾದುದ್ದು; ಅದನ್ನು ಕಾಮ-ಕಾಂಚನ ವಿಷಯಗಳಿಗಾಗಿ ಸುರಿಸಿ ವ್ಯರ್ಥಗೊಳಿಸುತ್ತೇವೆ ಎಂದು ಶ್ರೀರಾಮಕೃಷ್ಣರು ಹೇಳುವಂತಿದೆ.

### ವ್ಯಾಕುಲತಾ ಯೋಗ

ಅವರು ಮುಂದುವರಿದು ಹೇಳುತ್ತಾರೆ: ''ವ್ಯಾಕುಲತೆ ಉಂಟಾಯಿತು ಎಂದರೆ ಅರುಣೋದಯವಾದ ಹಾಗೆ. ಬಳಿಕ ಸೂರ್ಯೋದಯ. ವ್ಯಾಕುಲತೆ ಆದ ನಂತರವೇ ಭಗವಂತನ ದರ್ಶನ.'' ನಾವು ನೋಡುವಂತೆ ಶ್ರೀರಾಮಕೃಷ್ಣರು ಭಗವದ್ವ್ಯಾಕುಲತೆಗೆ ಹೆಚ್ಚು ಒತ್ತನ್ನು ನೀಡುತ್ತಾರೆ. ಇದನ್ನು ಅವರ ವ್ಯಾಕುಲತಾ ಯೋಗ ಎಂದು ಕರೆಯಬಹುದು. ಅವರ ಜೀವನದಲ್ಲಿಯೇ ಅದೆಂತಹ ವ್ಯಾಕುಲತೆಯನ್ನು ನಾವು ಕಾಣುತ್ತೇವೆ.

ಅವರಲ್ಲಿ ವ್ಯಾಕುಲತೆ ಅದೆಷ್ಟು ತೀವ್ರವಾಗಿತ್ತೆಂದರೆ, ಅವರಿಗೆ ಹಗಲು ಯಾವಾಗಾಯಿತು, ರಾತ್ರಿ ಯಾವಾಗಾಯಿತು ಎಂಬುದೇ ತಿಳಿಯುತ್ತಿರಲಿಲ್ಲವಂತೆ. ಒದ್ದೆಯ ಟವಲನ್ನು ಹಿಂಡಿದಂತೆ ಹೃದಯ ವೇದನೆ ಉಂಟಾಗುತ್ತಿತ್ತಂತೆ. ಸಂಜೆಯ ವೇಳೆ ಮುಖವನ್ನು ನೆಲಕ್ಕೆ ತೀಡುತ್ತ, ''ಅಮ್ಮಾ, ಒಂದು ದಿನ ಆಗಲೇ ಕಳೆದುಹೋಯಿತು, ಇನ್ನೂ ನಿನ್ನ ದರ್ಶನವಾಗಲಿಲ್ಲ'' ಎನ್ನುತ್ತ ಗೋಗರೆಯುತ್ತಿದ್ದರು. ಅವರಿಗೆ ಭಗವಂತನನ್ನು ಕಾಣದೆ ಬದುಕುವುದೇ ಅಸಾಧ್ಯವಾಯಿತು — ನಮಗೆ ಹಣ ಮುಂತಾದವುಗಳು ಇಲ್ಲದೆ ಬದುಕಲಾಗದೆ ಇರುವಂತೆ.

ಶ್ರೀರಾಮಕೃಷ್ಣರು ಈ ಸಂದರ್ಭದಲ್ಲಿ ಮೂರು ಬಗೆಯ ಪ್ರೀತಿಯ ಸಂಬಂಧವಾಗಿ ಹೇಳುತ್ತಾರೆ: ''ಮುಖ್ಯಾಂಶವೇನೆಂದರೆ ಭಗವಂತನನ್ನು ಪ್ರೀತಿಸಬೇಕು — ತಾಯಿ ಮಗುವನ್ನು ಪ್ರೀತಿಸುವ ಹಾಗೆ, ಸತಿ ಪತಿಯನ್ನು ಪ್ರೀತಿಸುವ ಹಾಗೆ, ವಿಷಯಿ ವಿಷಯಗಳನ್ನು ಪ್ರೀತಿಸುವ ಹಾಗೆ. ಈ ಮೂರು ಪ್ರೀತಿಗಳನ್ನೂ ಈ ಮೂರೂ ಆಕರ್ಷಣೆಗಳನ್ನೂ ಒಟ್ಟುಗೂಡಿಸಿದರೆ ಅದು ಏನಾಗುತ್ತದೋ ಅಷ್ಟನ್ನೂ ಭಗವಂತನ ಕಡೆ ತಿರುಗಿಸುವುದಾದರೆ ಆತನ ದರ್ಶನ ದೊರೆಯುತ್ತದೆ.''

ತಾಯಿ-ಮಗುವಿನ ಪ್ರೀತಿಯಲ್ಲಿ ಆತ್ಮ-ತ್ಯಾಗವಿರುತ್ತದೆ. ತಾಯಿ ಮಗುವಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧಳಾಗಿರುತ್ತಾಳೆ. ಮಗುವಿನ ಸುಖವೇ ಆಕೆಯ ಸುಖ. ಹಾಗೆಯೇ ನಾವು ಭಗವಂತನಿಗಾಗಿ ಯಾವುದೇ ತ್ಯಾಗಕ್ಕೂ ಸಿದ್ಧರಿರಬೇಕು. ಸತಿಗೆ ಪತಿಯ ಮೇಲಿನ ಪ್ರೀತಿ ಏಕಾಂತಿಕವಾದುದು. ಪತಿಯನ್ನಲ್ಲದೆ ಬೇರಾರನ್ನೂ ಪ್ರೀತಿಸುವುದಿಲ್ಲ. ಇತರರೊಡನೆ ಬೇರೆ ಬೇರೆ ಸಂಬಂಧವಿರಬಹುದು, ಆದರೆ ಪತಿಯೊಡನೆಯ ಸಂಬಂಧ ವಿಶೇಷವಾದುದು. ಹಾಗೆಯೇ ನಾವು ಭಗವಂತನನ್ನು ಏಕಾಂತಿಕವಾಗಿ ಪ್ರೀತಿಸಬೇಕು. ವಿಷಯಿಯು ಹಣ ಮುಂತಾದ ವಿಷಯವಸ್ತುಗಳನ್ನು ತನ್ನ ಸ್ವಂತದ್ದಾಗಿ ಇಟ್ಟುಕೊಳ್ಳಲು ಬಯಸುತ್ತಾನೆ. ಹಾಗೆ ಭಗವಂತನನ್ನು ನಮ್ಮವನನ್ನಾಗಿ ಮಾಡಿಕೊಳ್ಳಬೇಕು.

ಶ್ರೀರಾಮಕೃಷ್ಣರ ನುಡಿ: ''ವ್ಯಾಕುಲನಾಗಿ ಆತನನ್ನು ಕರೆಯಬೇಕು. ಬೆಕ್ಕಿನ ಮರಿಗೆ ಕೇವಲ 'ಮಿಯಾವ್, ಮಿಯಾವ್' ಅಂತ ತಮ್ಮ ತಾಯಿಯನ್ನು ಕರೆಯುವುದೊಂದೇ ಗೊತ್ತಿರುತ್ತದೆ. ತಾಯಿ ಅದನ್ನು ಎಲ್ಲಿ ಇಡುವುದೋ ಅಲ್ಲಿಯೇ ಬಿದ್ದಿರುತ್ತದೆ. ಕೆಲವು ವೇಳೆ ಅಡಿಗೆ ಮನೆಯಲ್ಲಿ, ಇನ್ನು ಕೆಲವು ವೇಳೆ ನೆಲದ ಮೇಲೆ, ಮತ್ತೆ ಕೆಲವು ವೇಳೆ ಹಾಸಿಗೆಯ ಮೇಲೆ ಇಡುತ್ತದೆ. ಅದಕ್ಕೇನಾದರೂ ತೊಂದರೆ ಬಂದರೆ ಅದು ಕೇವಲ 'ಮಿಯಾವ್, ಮಿಯಾವ್' ಅಂತ ಕೂಗುತ್ತದೆ. ಅದಕ್ಕೆ ಇನ್ನು ಬೇರೆ ಏನೂ ಗೊತ್ತಿಲ್ಲ. ತಾಯಿ ಬೆಕ್ಕು ಎಲ್ಲಿದ್ದರೆ ತಾನೆ ಏನು, ಈ 'ಮಿಯಾವ್ ಮಿಯಾವ್' ಎಂಬ ಶಬ್ದವನ್ನು ಕೇಳಿದೊಡನೆಯೇ ಮರಿಯ ಹತ್ತಿರಕ್ಕೆ ಬಂದು ಬಿಡುತ್ತದೆ.''

ಇದೇ ವಿಷಯಕ್ಕೆ ಸಂಬಂಧಿಸಿದ ಒಂದು ಕತೆಯನ್ನು ಪ್ರಸ್ತಾಪಿಸಬಹುದು. ಬ್ರಹ್ಮನ ಮಾನಸಪುತ್ರರಾದ ಸನಕ, ಸನಂದನ, ಸನಾತನ ಮತ್ತು ಸನತ್ಕುಮಾರ ಇವರು ಒಂದು ಕಡೆ ಆಕಾಶದ ಕಡೆ ಕತ್ತೆತ್ತಿ ನೋಡುತ್ತ ಏನೋ ಆಲೋಚನೆಯಲ್ಲಿ ತಲ್ಲೀನರಾಗಿದ್ದರು. ಶಿವಪಾರ್ವತಿಯರು ಆ ದಿಕ್ಕಿನಲ್ಲಿ ಬರುತ್ತಿರುವುದನ್ನು ಅವರು ಗಮನಿಸಲೇ ಇಲ್ಲ. 'ನಮಗೆ ಅಗೌರವವನ್ನು ತೋರಿಸುತ್ತಿದ್ದಾರೆ' ಎಂದು ಪಾರ್ವತಿಗೆ ಅನಿಸಿ, ಕೋಪದಿಂದ, ''ಒಂಟೆಗಳಂತೆ ಕತ್ತೆತ್ತಿಕೊಂಡಿರುವುದರಿಮದ ನೀವು ಒಂಟೆಗಳೇ ಆಗಿ'' ಎಂದು ಶಾಪವನ್ನು ದಯಪಾಲಿಸಿದಳು! ಕೆಲವು ಕಾಲಾನಂತರ, ತನ್ನ ಮಕ್ಕಳಿಗೆ ಈ ರೀತಿ ಶಾಪವನ್ನು ನೀಡಿದ್ದಕ್ಕಾಗಿ ತುಂಬ ಮನನೊಂದು, ಅವರಿಗೆ ಸಮಾಧಾನ ನೀಡಲು ಅಲ್ಲಿಗೆ ಹೋದಳು. ಒಂಟೆಗಳಾಗಿದ್ದ ತನ್ನ ಮಕ್ಕಳನ್ನು ಪ್ರೀತಿಯಿಂದ, ''ನಾನು ಎಂತಹ ತಪ್ಪು ಮಾಡಿದೆ? ನಿಮಗೀಗ ಎಂತಹ ದುಃಸ್ಥಿತಿಯುಂಟಾಗಿದೆಯಲ್ಲ!'' ಎಂದು ತನ್ನ ಮಾತೃವಾತ್ಸಲ್ಯವನ್ನು ವ್ಯಕ್ತಪಡಿಸಿದಳು. ಒಂಟೆಯ ರೂಪದಲ್ಲಿದ್ದ ಆ ಋಷಿವರೇಣ್ಯರು ಹೇಳಿದರು: ''ಇಲ್ಲ ತಾಯಿ! ನಿನ್ನ ಶಾಪ ನಮಗೆ ವರವೇ ಆಯಿತು. ಈಗ ನಾವು ಎಲ್ಲೆಂದರಲ್ಲಿ ಮಲಗಿಕೊಳ್ಳಬಹುದು. ಭಿಕ್ಷೆಗೆ ಹೋಗುವ ತಾಪತ್ರಯವಿಲ್ಲ, ಸೊಪ್ಪುಸೊದೆ ತಿಂದುಕೊಂಡು ಇರುತ್ತೇವೆ. ಭಕ್ತರ ಕಾಟವೂ ಇಲ್ಲ.'' ಭಗವಂತ ಎಲ್ಲಿರಿಸುತ್ತಾನೊ ಹೇಗಿರಿಸುತ್ತಾನೊ ಅಲ್ಲಿಯೇ ಸುಖವಾಗಿರಬೇಕು.

### ಉದಾಸೀನರಾಗಿರಬೇಕು

'ಮ'ರಿಗೆ ಶ್ರೀರಾಮಕೃಷ್ಣರ ಮೂರನೆಯ ಭೇಟಿ. ಶ್ರೀರಾಮಕೃಷ್ಣರು ತಮ್ಮ ಕೊಠಡಿಯಲ್ಲಿ ಚಿಕ್ಕ ಮಂಚದ ಮೇಲೆ ಕುಳಿತುಕೊಂಡಿದ್ದಾರೆ. ಕೊಠಡಿ ಭಕ್ತರಿಂದ ಕಿಕ್ಕಿರಿದು ತುಂಬಿದೆ. ಅವರು ನರೇಂದ್ರನೊಡನೆ (ಸ್ವಾಮಿ ವಿವೇಕಾನಂದ) ಮಾತನಾಡುತ್ತಿದ್ದಾರೆ. ಅವರು ಹೇಳುತ್ತಿದ್ದಾರೆ: ''ನೀನು ಏನು ಹೇಳುತ್ತೀಯೆ? ಪ್ರಾಪಂಚಿಕರು ಎಷ್ಟೊಂದಾಗಿ ಆಡಿಕೊಳ್ಳುತ್ತಾರೆ! ಏನು ಕತೆ! ಆದರೆ ನೋಡು, ಆನೆ ನಡೆದು ಹೋಗುವಾಗ ಅದರ ಹಿಂದೆ ಎಷ್ಟೊಂದು ಪ್ರಾಣಿಗಳು ಎಷ್ಟೊಂದು ವಿಧವಾಗಿ ಚೀತ್ಕಾರ ಮಾಡುತ್ತವೆ! ಆದರೂ ಅದು ಮಾತ್ರ ಹಿಂದಿರುಗಿ ನೋಡುವುದೇ ಇಲ್ಲ. ನಿನ್ನನ್ನು ಯಾರಾದರೂ ನಿಂದಿಸಿದರೆ ನಿನಗೇನನಿಸುತ್ತದೆ?'' ನರೇಂದ್ರ ಹೇಳಿದ, ''ನಾನು ಭಾವಿಸುತ್ತೇನೆ, ನಾಯಿ 'ಬೊವ್ ಬೊವ್' ಅನ್ನುತ್ತದೆ ಎಂದು. ಶ್ರೀರಾಮಕೃಷ್ಣರು ನಗುತ್ತ: ''ಬೇಡಪ್ಪ, ಅಷ್ಟು ದೂರ ಹೋಗಬೇಡ! ಭಗವಂತ ಸರ್ವಭೂತಗಳಲ್ಲಿಯೂ ಇದ್ದಾನೆ. ಆದರೆ ನೀನು ಒಳ್ಳೆಯವರೊಡನೆ ಹೆಚ್ಚಾಗಿ ಬೆರೆಯಬಹುದು. ಕೆಟ್ಟವರಿಂದ ಬಹಳ ದೂರವೇ ಇರಬೇಕು.

'ನಾಯಿ ಬೌ ಬೌ' ಎನ್ನುತ್ತದೆ — ಇದು ತಿರಸ್ಕಾರ ಭಾವನೆಯನ್ನು ಸೂಚಿಸುತ್ತದೆ. ನಾವು ಉದಾಸೀನರಾಗಿರಬೇಕೇ ಹೊರತು ತಿರಸ್ಕಾರ ಭಾವನೆ ಇರಬಾರದು ಎಂಬುದು ಶ್ರೀರಾಮಕೃಷ್ಣರ

ಅಭಿಪ್ರಾಯ. ಉದಾಸೀನತೆಯೆಂದರೆ, ನಾನು ಎಲ್ಲರಿಗೂ ಮಾನ್ಯತೆ ನೀಡುತ್ತೇನೆ, ಆದರೆ ನನಗೆ ಯಾರ, ಯಾವುದರ ಆವಶ್ಯ ಕತೆಯೂ ಇಲ್ಲ. ಒಬ್ಬ ವ್ಯಕ್ತಿಯನ್ನು ದ್ವೇಷಿಸಿದರೂ ಪರವಾಗಿಲ್ಲ — ಇಲ್ಲಿ ವ್ಯಕ್ತಿಗೆ ಪ್ರಾಧಾನ್ಯವಿರುತ್ತದೆ, ಆತನ ಬಗೆ ತಿರಸ್ಕಾರ ವಿರಬಾರದು. ವ್ಯಕ್ತಿಯ ಇರುವಿಕೆಯನ್ನೇ ಕಡೆಗಣಿಸುವುದು ಅವ ನಿಗೆ ಉಂಟಾಗಬಹುದಾದ ಅತಿದೊಡ್ಡ ಆಘಾತ. ಇತರರ ಗಮನವನ್ನು ಸೆಳೆಯುವ ಪ್ರವೃತ್ತಿ (attention drawing syndrome) ಹೆಚ್ಚು ಕಡಿಮೆ ಎಲ್ಲರಲ್ಲೂ ಇರುತ್ತದೆ. ವಿಚಿತ್ರ ಬಣ್ಣಬಣ್ಣದ ಉಡುಪಿನ ಮೂಲಕ, ವಿಶಿಷ್ಟ ಸಾಧನೆಯ ಮೂಲಕ — ಹೀಗೆ ಅನೇಕ ರೀತಿಯಲ್ಲಿ ಸುಸಂಸ್ಕೃತವಾಗಿ ಆಗಲಿ, ಅಸಂಸ್ಕೃತವಾಗಿ ಆಗಲಿ — ಇತರರ ಗಮನವನ್ನು ಸೆಳೆಯಲು ಜನ ಇಷ್ಟಪಡುತ್ತಾರೆ. ಯಾರೂ ನಗಣ್ಯರಾಗಿರಲು ಇಷ್ಟಪಡುವು ದಿಲ್ಲ — nobody wants to be nobody. ಆದರೆ ನಗಣ ್ಯತೆಯಲ್ಲಿಯೇ ಅಗಣ್ಯಸುಖವನ್ನು ಕಾಣುವುದು ಅಧ್ಯಾತ್ಮ.

ಶ್ರೀರಾಮಕೃಷ್ಣರು ಒಂದು ಸಾರಿ ದುರ್ಗಾಪೂಜೆಯ ಸಮಯ ದಲ್ಲಿ ಜಗನ್ಮಾತೆಯ ದರ್ಶನಕ್ಕಾಗಿ ಯದುನಾಥ ಮಲ್ಲಿಕನ ಮನೆಗೆ ಹೋಗಿದ್ದರು. ಯದುನಾಥನು ಅಮೃತಶಿಲೆಯ ಮೇಜಿನ ಮೇಲೆ ಕಾಲುಚಾಚಿ ದಿಂಬಿಗೆ ಒರಗಿಕೊಂಡು ಪವಡಿಸಿದ್ದನು. ಶ್ರೀರಾಮಕೃಷ್ಣರು ಬಂದರೂ ಅವರನ್ನು ಬರಮಾಡಿಕೊಳ್ಳದೆ, ''ಏನು ಭಟ್ಟಾಚಾರ್ಜಿ?'' ಎಂದು ತಿರಸ್ಕಾರದ ಧ್ವನಿಯಲ್ಲಿಯೇ ವಿಚಾರಿಸಿದನು. ಶ್ರೀರಾಮಕೃಷ್ಣರು ಇದರಿಂದ ಸ್ವಲ್ಪವೂ ವಿಚಲಿತ ರಾಗದೆ, ಅವನನ್ನು ಆದರದಿಂದಲೇ ಮಾತನಾಡಿಸಿ, ನೇರವಾಗಿ ದುರ್ಗಾಮಂಟಪದ ಕಡೆ ಹೋಗಿ ಜಗನ್ಮಾತೆಗೆ ಪ್ರಣಾಮ ಮಾಡಿ ಪ್ರಾರ್ಥನೆ ಸಲ್ಲಿಸಿ ಹೊರಟರು. ಹಿಂತಿರುಗುವಾಗ, ''ಏನೊ, ಯದು, ಜಗನ್ಮಾತೆಯ ಪ್ರಸಾದ ಕೊಡುವುದಿಲ್ಲವೆ?'' ಎಂದು ಕೇಳಿದರು. ಅವನ ತಾಯಿ ಪ್ರಸಾದ ತಂದು ಕೊಟ್ಟಳು. ಮನೆ ಯಿಂದ ಹೊರಟಮೇಲೆ ಶ್ರೀರಾಮಕೃಷ್ಣರ ಜತೆಗಿದ್ದ ಭಕ್ತರು, ''ಇಂಥವರ ಮನೆಗೆ ನೀವು ಹೋಗಬಾರದು'' ಎಂದು ಆಕ್ಷೇಪಿಸಿದರು. ಶ್ರೀರಾಮಕೃಷ್ಣರು: ''ನಾನು ಹೋಗಿದ್ದು ತಾಯಿಯ ದರ್ಶನಕ್ಕೆ. ತಾಯಿಯ ದರ್ಶನವಾಯಿತು, ಪ್ರಸಾ ದವೂ ಸಿಕ್ಕಿತು. ಇನ್ನೇನಂತೆ? ನೀವು ಮಾನ್ಯತೆ ಗೌರವವನ್ನು ಅಪೇಕ್ಷಿಸುತ್ತೀರಿ. ನೀನು ಸಾಧುವಾಗಬೇಕೆಂದಿದ್ದರೆ ಮೊದಲು ಅಹಂಕಾರವನ್ನು ಸಾಯಿಸು. ನೀವು ಗೌರವವನ್ನಾಗಲಿ, ಅಗೌ ರವವನ್ನಾಗಲಿ ಲೆಕ್ಕಿಸಬಾರದು.'' ಹೀಗೆ ಶ್ರೀ ರಾಮಕೃಷ್ಣರು ಉದಾಸೀನತೆಯ ಪಾಠ ಕಲಿಸಿದರು.

## ದುಷ್ಟರಿಂದ ದೂರವಿರಿ

ಶ್ರೀರಾಮಕೃಷ್ಣರು ಹೇಳುತ್ತಾರೆ: ''ಶಾಸ್ತ್ರದಲ್ಲಿ ಹೇಳಿದೆ, 'ಆಪೋ ನಾರಾಯಣಃ' — ನೀರು ಭಗವಂತನ ಒಂದು ರೂಪ, ಎಂದು. ಆದರೆ ಕೆಲವು ನೀರು ಪೂಜೆಗೆ ಅರ್ಹವಾಗಿವೆ, ಇನ್ನು ಕೆಲವು ಮುಖ ತೊಳೆಯಲು, ಮತ್ತೆ ಕೆಲವು ಮುಸುರೆ ತಿಕ್ಕಲು, ಮತ್ತು ಕೆಲವು ಬಟ್ಟೆ ಒಗೆಯಲು. ಇದನ್ನು ಕುಡಿಯುವುದ ಕ್ಕಾಗಲಿ, ದೇವರ ಪೂಜೆಗಾಗಲಿ ಉಪಯೋಗಿಸಲಾಗುವುದಿಲ್ಲ. ಹಾಗೇನೇ ಭಗವಂತ ಎಲ್ಲರ ಹೃದಯದಲ್ಲಿಯೂ — ಸಾಧು, ಅಸಾಧು, ಭಕ್ತ, ಅಭಕ್ತ ಎಲ್ಲರಲ್ಲೂ ಇದ್ದಾನೆ. ಆದರೆ ಅಸಾಧು, ಅಭಕ್ತ, ದುಷ್ಟ-ಇವರೊಡನೆ ವ್ಯವಹರಿಸಬಾರದು, ಸ್ನೇಹ ಬೆಳೆಸ ಕೂಡದು. ಕೆಲವರೊಡನೆ ಕೇವಲ ಒಂದೆರಡು ಮಾತುಕತೆ ಆಡ ಬಹುದು. ಆದರೆ ಇನ್ನು ಕೆಲವರೊಡನೆ ಹಾಗೂ ಮಾತನಾಡ ಕೂಡದು. ಅಂಥವರಿಂದ ಬಹಳ ದೂರದಲ್ಲೇ ಇದ್ದುಬಿಡ ಬೇಕು.'' **ದುಃಸಂಗಃ ಸರ್ವದೈವ ತ್ಯಾಜ್ಯಃ** — ಎಂಬ ನಾರದ ಮಹರ್ಷಿಗಳ ಎಚ್ಚರಿಕೆಯನ್ನು ಇಲ್ಲಿ ಸ್ಮರಿಸಿಕೊಳ್ಳಬಹುದು. ಈ ವಿಷಯದ ಬಗ್ಗೆ ಚರ್ಚಿಸುತ್ತ ಸ್ವಾಮಿ ಯತೀಶ್ವರಾನಂದರು ಒಂದು ಬಹುಮುಖ್ಯವಾದ ವಿಷಯವನ್ನು ಹೇಳುತ್ತಾರೆ. ''ಕೆಲವರಿರುವರು, ಅವರ ಗಮನ ಇತರರನ್ನು ಉದ್ಧಾರ ಮಾಡು ವುದರಲ್ಲೇ. ಪಶ್ಚಿಮದಲ್ಲಿ ಇಂಥವರ ಸಂಖ್ಯೆ ಬಹಳ. ಇತರರನ್ನು ನರಕಜ್ವಾಲೆಯಿಂದ ರಕ್ಷಿಸಬೇಕೆಂದು ಅವರು ಮುನ್ನುಗ್ಗುತ್ತಾರೆ. ನೀವು ದೊಡ್ಡ ಸಂತರಾಗಿರುವಿರಿ, ಯಾರೊಡನೆ ಬೇಕಾದರೂ ನೀವು ಬೆರೆಯಬಹುದೆಂದು ಭಾವಿಸಬೇಡಿ. ಬುದ್ಧ, ಕ್ರಿಸ್ತ, ರಾಮಕೃಷ್ಣರಂಥವರು ಪಾಪಿಗಳೆಡೆಗೆ ಹೋಗಿ, ಅವರೊಡನಿದ್ದು ಅವರನ್ನು ಪಾಪ ವಿಮುಕ್ತರನ್ನಾಗಿಸಬಲ್ಲರು. ನಿಮ್ಮ ವಿಚಾರವೇ ಬೇರೆ. ನಿಮಗೆ ನಿಮ್ಮನ್ನು ನೀವು ಉದ್ಧಾರಮಾಡಿಕೊಳ್ಳುವಷ್ಟು ಶಕ್ತಿಯೂ ಇಲ್ಲ. ನಾನು ಹೇಳುವುದು ನಿಮಗೆ ಸರಿ ತೋರದಿದ್ದರೆ ಪಾಪಿಗಳನ್ನು ಉದ್ಧಾರಮಾಡಲು ಹೋಗಿ, ಅದರ ಪರಿಣಾಮ ಏನೆಂಬುದನ್ನು ನೀವೇ ಕಂಡುಕೊಳ್ಳಿ.'' *('ಧ್ಯಾನ ಮತ್ತು ಆಧ್ಯಾತ್ಮಿಕ ಜೀವನ'. ಪು.೧೨೪)*

ಒಬ್ಬ ಭಕ್ತ ಕೇಳುತ್ತಾನೆ: ''ಮಹಾಶಯರೇ, ದುಷ್ಟ ನಮಗೆ ಕೇಡು ತರಲು ಉದ್ಯುಕ್ತನಾಗಿದ್ದರೂ, ಅಥವಾ ತಂದೇ ಬಿಟ್ಟರೂ ನಾವು ಸುಮ್ಮನೆ ಕೈಕಟ್ಟಿ ಕುಳಿತಿರಬೇಕೆ?''

ಶ್ರೀರಾಮಕೃಷ್ಣರು: ''ಸಮಾಜದ ಮಧ್ಯೆ ಇರಬೇಕಾದರೆ, ದುಷ್ಟರ ಕೈಯಿಂದ ತಪ್ಪಿಸಿಕೊಳ್ಳಲು ಮನುಷ್ಯ ಸ್ವಲ್ಪ ತಮೋಗುಣ ವನ್ನು ಪ್ರದರ್ಶಿಸಬೇಕಾಗುತ್ತದೆ. ಆದರೆ ಮುಯ್ಯಿಗೆ ಮುಯ್ಯಿ ತೋರಿಸಬಾರದು.''

ಸ್ವಾಮಿ ವಿವೇಕಾನಂದರು ಹೇಳುವಂತೆ ಎರಡು ರೀತಿಯ ಜನ ಪ್ರತೀಕಾರ ಮಾಡುವುದಿಲ್ಲ: ಒಬ್ಬನು ಪ್ರತೀಕಾರ ಮಾಡ ಲಾರ, ಮತ್ತೊಬ್ಬನು ಸಾಮರ್ಥ್ಯವಿದ್ದರೂ ಪ್ರತೀಕಾರ ಮಾಡದೆ ಕ್ಷಮಿಸುತ್ತಾನೆ. ಅಹಿಂಸೆ ಹೇಡಿಗಳಿಗಲ್ಲ ಎಂದು ಮಹಾತ್ಮಾ ಗಾಂಧಿ ಕೂಡ ಒಪ್ಪಿಕೊಳ್ಳುತ್ತಾರೆ. ಓರ್ವ ಮಹಿಳೆಯು ದೌರ್ಜನ್ಯಕ್ಕೊಳ ಗಾಗುತ್ತಿರುವುದನ್ನು ನೋಡಿಯೂ ಏನೂ ಮಾಡದೆ ಬಂದ ತಮ್ಮ ಅನುಯಾಯಿಗಳಲ್ಲಿ ಕೆಲವರನ್ನು ಗಾಂಧೀಜಿ ಚೆನ್ನಾಗೆ ತರಾಟೆಗೆ ತೆಗೆದುಕೊಳ್ಳುತ್ತಾರೆ. ''ಬಲಗೆನ್ನೆಗೆ ಹೊಡೆದರೆ ಎಡಗೆನ್ನೆಯನ್ನು ತೋರಿಸು'' ಎಂಬ ಕ್ರಿಸ್ತನ ಮಾತು ಮುಯ್ಯಿಗೆ ಮುಯ್ಯಿ ತೋರಿಸಬಾರದು, ಸೇಡಿನ ಮನೋಭಾವವಿರಬಾರದು ಎಂಬು